ಆ. ಮಂಡಳಿಯು ಚೇಳೂರಿನಲ್ಲಿ 66 – 11 ಕೆವಿ ಉಪಕೇಂದ್ರವೊಂದನ್ನು ಸ್ಥಾಪಿಸುತ್ತಿರುವುದರಿಂದ ಮತ್ತು ಇದರ ಸ್ಥಾಪನೆಯಿಂದ ಹೊಸಕೆರೆ ಗ್ರಾಮ ಹಾಗೂ ಅದರ ಸುತ್ತಮುತ್ತಲ ಪ್ರದೇಶದ ವಿದ್ಯುತ್ ಸರಬರಾಜು ಸ್ಥಿತಿಯು ಸುಧಾರಿಸುವುದರಿಂದ ಹೊಸಕೆರೆ ಗ್ರಾಮದಲ್ಲಿ ಉಪಕೇಂದ್ರ ಸ್ಥಾಪಿಸುವ ಅಗತ್ಯವಿಲ್ಲ.

ಇ. ಪ್ಯಾರಾ 'ಆ' ದಲ್ಲಿ ನೀಡಿರುವ ಉತ್ತರದನ್ವಯ ಈ ಪ್ರಶ್ನೆ ಏಳುವುದಿಲ್ಲ.

ಬೆಂಗಳೂರು ನಗರದಲ್ಲಿ ಚಲಿಸುವ ವಾಹನಗಳ ಸಂಖ್ಯೆ

1268 (1036): ಶ್ರೀ ಆರ್ ದಯಾನಂದರಾವ್ (ಗಾಂಧಿನಗರ):–

ಮಾನ್ಯ ವಿಜ್ಞಾನ, ತಂತ್ರಜ್ಞಾನ, ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ಬೆಂಗಳೂರು ನಗರದಲ್ಲಿ ಪ್ರತಿನಿತ್ಯವೂ ರಸ್ತೆಯ ಮೇಲೆ ಚಲಿಸುವ ಎಲ್ಲಾ ವಿಧವಾದ ವಾಹನಗಳ (ಸರಾಸರಿ) ಸಂಖ್ಯೆ ಎಷ್ಟು;

ಬಿ. ಬೆಂಗಳೂರು ನಗರದಲ್ಲಿ ಹೊಗೆ ಉಗುಳುವಿಕೆಯ ಪರೀಕ್ಷೆಗೆ ಜನವರಿ 92ರಿಂದ ಡಿಸೆಂಬರ್ 92ರ ಕೊನೆಯವರೆಗೆ ಎಷ್ಟು ವಾಹನಗಳನ್ನು ಬಿ.ಟಿ.ಎಸ್. ಬಸ್‌ಗಳು ಸೇರಿ ಪರೀಕ್ಷಿಸಲಾಗಿದೆ;

ಸಿ. ಎಷ್ಟು ವಾಹನಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಹೊಗೆ ವಿಸರ್ಜನೆಯನ್ನು ಪತ್ತೆ ಹಚ್ಚಲಾಗಿದೆ;

ಡಿ. ಎಷ್ಟು ಪ್ರಕರಣಗಳನ್ನು ದಾಖಲು ಮಾಡಲಾಗಿದೆ ? ಮತ್ತು ದಂಡ ರೂಪದಲ್ಲಿ ವಸೂಲಾದ ಹಣವೆಷ್ಟು;

ಇ. ಲಾರಿಗಳು ಮತ್ತು ಬಿ.ಟಿ.ಎಸ್ ಬಸ್‌ಗಳ ಮೇಲೆ ಹೊಗೆ ವಿಸರ್ಜಿಸುವ ತೀವ್ರ ಕಾರ್ಯಕ್ರಮ ಏನಾದರೂ ಹಾಕಿಕೊಂಡಿದೆಯೇ ?

ಶ್ರೀ ಎನ್.ಜಿ. ಹಾಲಪ್ಪ (ವಿಜ್ಞಾನ, ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು):–

ಎ. ಪೋಲೀಸ್ ಇಲಾಖೆಯಿಂದ ಪಡೆಯಲಾದ ಮಾಹಿತಿ ಕೆಳಕಂಡಂತಿದೆ.	ಸಾರಿಗೆ ಆಯುಕ್ತರಿಂದ ಪಡೆಯಲಾದ ಮಾಹಿತಿ ಈ ಕೆಳಕಂಡಂತಿದೆ
ವಾಹನಗಳ ಸಂಖ್ಯೆ	
6,89,537	6,95,070
1. ದ್ವಿಚಕ್ರ ವಾಹನಗಳು	
5,29,601	
2. ತ್ರಿಚಕ್ರ ವಾಹನಗಳು	
24,442	
3. ನಾಲ್ಕು ಚಕ್ರಗಳು ಅಥವಾ ವಾಹನಗಳು	
1,00,461	
4. ಭಾರವುಳ್ಳ ವಾಹನಗಳು	
35,033	
ಬಿ. ಒಟ್ಟು ಪರೀಕ್ಷಿಸಲಾದ ವಾಹನಗಳ ಸಂಖ್ಯೆ	

1,00,461	25,485
ಸಿ. 2,025 ಪ್ರಕರಣಗಳು	1,648 ಪ್ರಕರಣಗಳು
ಡಿ. 2401 ಪ್ರಕರಣಗಳು ದಂಡ ರೂಪದಲ್ಲಿ ವಸೂಲಾದ ಹಣ ರೂ. 3,36,100	1648 ಪ್ರಕರಣಗಳ ರೂ. 10,52,00
ಇ. ಇಲ್ಲಾ	ಇಲ್ಲಾ

ಬೆಂಗಳೂರು ನಗರದಲ್ಲಿ ಅಡಿಗೆ ಅನಿಲ ಹೊಂದಿರುವ ಪಡಿತರ ಚೀಟದಾರರ ಸಂಖ್ಯೆ

1269 (1818): ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ):-

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಅಡಿಗೆ ಅನಿಲ ಹೊಂದಿರುವ ಪಡಿತರ ಚೀಟಿದಾರರ ಒಟ್ಟು ಸಂಖ್ಯೆ ಎಷ್ಟು;

ಆ. ಅಡಿಗೆ ಅನಿಲ ಹೊಂದಿರುವ ಪಡಿತರ ಚೀಟಿದಾರರಿಗೆ ಪ್ರತಿ ತಿಂಗಳು ನೀಡುತ್ತಿರುವ ಸೀಮೆಎಣ್ಣೆಯ ಒಟ್ಟು ಪ್ರಮಾಣವೆಷ್ಟು;

ಇ. ಪ್ರತಿ ತಿಂಗಳು ಸೀಮೆಎಣ್ಣೆಯನ್ನು ಪಡೆಯದ ಅಡಿಗೆ ಅನಿಲ ಹೊಂದಿರುವ ಕಾರ್ಡುದಾರರ ಸಂಖ್ಯೆ ಎಷ್ಟು;

ಈ. ಅಡಿಗೆ ಅನಿಲ ಹೊಂದಿರುವ ಕಾರ್ಡುದಾರರು ಪಡೆಯದಿರುವ ಸೀಮೆಎಣ್ಣೆಯನ್ನು ನ್ಯಾಯಬೆಲೆ ಅಂಗಡಿ ಮಾಲೀಕರು ಹಾಗೂ ಸೀಮೆಎಣ್ಣೆ ಹಾಕರ್ಸ್‌ಗಳು ದುರುಪಯೋಗಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ. ಅಡಿಗೆ ಅನಿಲ ಹೊಂದಿರುವ ಕಾರ್ಡುದಾರರಿಗೆ ಸೀಮೆಎಣ್ಣೆ ಕೊಡುತ್ತಿರುವುದನ್ನು ತಡೆಯಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ. 92,162

ಆ. 184 ಕಿ.ಲೀ. ಪ್ರತಿ ಕಾರ್ಡಿಗೆ 2 ಲೀಟರ್‌ನಂತೆ.

ಇ. ಸಾಧಾರಣವಾಗಿ ಅಡಿಗೆ ಅನಿಲ ಹೊಂದಿರುವ ಪಡಿತರ ಚೀಟಿದಾರರು ಪ್ರತಿ ತಿಂಗಳು ಸೀಮೆಎಣ್ಣೆಯನ್ನು ಪಡೆಯುತ್ತಿದ್ದಾರೆ. ಸೀಮೆಎಣ್ಣೆಯನ್ನು ಪಡೆಯದಿರುವ ಕಾರ್ಡುದಾರರ ಸಂಖ್ಯೆ ಪ್ರತಿ ತಿಂಗಳು ಬೇರೆ ಬೇರೆಯಾಗಿರುತ್ತದೆ.

ಈ. ಹೌದು. ಇಂತಹ ವರ್ತಕರ ವಿರುದ್ಧ ಅಗತ್ಯ ವಸ್ತುಗಳ ಅಧಿನಿಯಮದಡಿಯಲ್ಲಿ ಹಾಗೂ ಇತರ ನಿಯಂತ್ರಣ ಆದೇಶಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಉ. ಮುಕ್ತ ಮಾರುಕಟ್ಟೆಯಲ್ಲಿ ಸೀಮೆಎಣ್ಣೆಯನ್ನು ಮಾರಾಟ ಮಾಡುವ ಯೋಜನೆ ಜಾರಿಗೆ ಬಂದ ನಂತರ ಅಡಿಗೆ ಅನಿಲ ಹೊಂದಿರುವ ಕಾರ್ಡುದಾರರಿಗೆ ಸೀಮೆಎಣ್ಣೆ ಸರಬರಾಜು ನಿಲ್ಲಿಸಬೇಕೆಂದು ಕೇಂದ್ರ ಸರ್ಕಾರ ಹೇಳಿದೆ.